Re.No. D. 221

भारत का राजपत्र
The Gazette of India
ಭಾರತ ರಾಜಪತ್ರ

(Extraordinary)
(ವಿಶೇಷ ಸಂಚಿಕೆ)

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | |
|---|---|---|
| सं 1, नई दिल्ली, बुधवार, 18 मई, 2022 | वैशाख 18, 1944 (शक) | खंड. 52 |
| No.1, New Delhi, Wednesday, May 18, 2022 | Vaishaka 18, 1944 (Saka) | Vol. 52 |
| ನಂ.1, ನವದೆಹಲಿ, ಬುಧವಾರ, ಮೇ 18, 2022 | ವೈಶಾಖ 18, 1944 (ಶಕ) | ಸಂಪುಟ. 52 |


**Ministry of Law and Justice**
(Legislative Department)
New Delhi, 18th May, 2022

ಕಾನೂನು ಮತ್ತು ನ್ಯಾಯ ಮಂತ್ರಾಲಯ
(ವಿಧಾಯೀ ಇಲಾಖೆ)
**ನವದೆಹಲಿ, 18ನೇ ಮೇ, 2022**

The Translation in Kannada of the following Act, namely:- (1) THE PASSPORT (ENTRY INTO INDIA) ACT, 1920 (ACT NO. 34 OF 1920) (2) THE PREVENTION AND CONTROL OF INFECTIOUS AND CONTAGIOUS DISEASES IN ANIMALS ACT, 2009 (ACT NO. 27 OF 2009) (3) THE LEGAL METROLOGY ACT, 2009 (ACT NO. 1 OF 2010) (4) THE CLINICAL ESTABLISHMENTS (REGISTRATION AND REGULATION) ACT, 2010 (ACT NO. 23 OF 2010) (5) THE LAND PORTS AUTHORITY OF INDIA ACT, 2010 (ACT NO. 31 OF 2010) (6) THE CENTRAL EDUCATIONAL INSTITUTIONS (RESERVATION IN TEACHERS' CADRE) ACT, 2019 (ACT NO. 10 OF 2019) (7) THE MUSLIM WOMEN (PROTECTION OF RIGHTS ON MARRIAGE) ACT, 2019 (ACT NO. 20 OF 2019) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:- (1) ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 (1920ರ ಅಧಿನಿಯಮ ಸಂಖ್ಯೆ 34) (2) ಪಶು ಸೋಂಕು ರೋಗಗಳ ಮತ್ತು ಸಾಂಕ್ರಾಮಿಕ ರೋಗಗಳ ಪ್ರತಿಬಂಧ ಮತ್ತು ನಿಯಂತ್ರಣ ಅಧಿನಿಯಮ, 2009 (2009 ರ ಅಧಿನಿಯಮ ಸಂಖ್ಯೆ 27) (3) ಕಾನೂನು ಮಾಪನ ವಿಜ್ಞಾನ ಅಧಿನಿಯಮ, 2009 (2010ರ ಅಧಿನಿಯಮ ಸಂಖ್ಯೆ 1) (4) ಚಿಕಿತ್ಸಾ ಕಾರ್ಯಸಂಸ್ಥೆಗಳ (ನೋಂದಣಿ ಮತ್ತು ವಿನಿಯಮ) ಅಧಿನಿಯಮ, 2010 (2010ರ ಅಧಿನಿಯಮ ಸಂಖ್ಯೆ 23) (5) ಭಾರತ ಭೂ ಬಂದರುಗಳ ಪ್ರಾಧಿಕಾರ ಅಧಿನಿಯಮ, 2010 (2010ರ ಅಧಿನಿಯಮ ಸಂಖ್ಯೆ 31) (6) ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ (ಶಿಕ್ಷಕ ವೃಂದದಲ್ಲಿ ಮೀಸಲಾತಿ) ಅಧಿನಿಯಮ, 2019 (2019 ರ ಅಧಿನಿಯಮ ಸಂಖ್ಯೆ 10) (7) ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019 (2019 ರ ಅಧಿನಿಯಮ ಸಂಖ್ಯೆ 20) – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920

## (1920ರ ಅಧಿನಿಯಮ ಸಂಖ್ಯೆ 34)

[9ನೇ ಸೆಪ್ಟೆಂಬರ್, 1920.]

ಭಾರತವನ್ನು ಪ್ರವೇಶಿಸುವ ವ್ಯಕ್ತಿಗಳು ಪಾಸ್‌ಪೋರ್ಟ್‌ಗಳನ್ನು ಹೊಂದಿರಬೇಕೆಂದು ಅಗತ್ಯಪಡಿಸುವ ಅಧಿಕಾರ ಹೊಂದುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಭಾರತವನ್ನು ಪ್ರವೇಶಿಸುವ ವ್ಯಕ್ತಿಗಳು ಪಾಸ್‌ಪೋರ್ಟ್‌ಗಳನ್ನು ಹೊಂದಿರಬೇಕೆಂದು ಅಗತ್ಯಪಡಿಸುವ ಅಧಿಕಾರವನ್ನು ಹೊಂದುವುದು ವಿಹಿತವಾಗಿರುವುದರಿಂದ, ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.**- (1) ಈ ಅಧಿನಿಯಮವನ್ನು ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,-

"ಪ್ರವೇಶ" ಎಂದರೆ ಜಲಮಾರ್ಗದ, ಭೂ ಮಾರ್ಗದ ಅಥವಾ ವಾಯುಮಾರ್ಗದ ಮೂಲಕ ಪ್ರವೇಶ;

"ಪಾಸ್‌ಪೋರ್ಟ್" ಎಂದರೆ, ನಿಯಮಿಸಿದ ಪ್ರಾಧಿಕಾರವು ನೀಡಿದ ಅಥವಾ ನವೀಕರಿಸಿದ ಮತ್ತು ಪಾಸ್‌ಪೋರ್ಟ್‌ಗಳ ಯಾವ ವರ್ಗಕ್ಕೆ ಪಾಸ್‌ಪೋರ್ಟ್ ಸಂಬಂಧಿಸಿದೆಯೋ ಆ ಪಾಸ್‌ಪೋರ್ಟ್‌ಗಳ ವರ್ಗಕ್ಕೆ ಸಂಬಂಧಿಸಿದಂತೆ ನಿಯಮಿಸಿದ ಷರತ್ತುಗಳನ್ನು ಪೂರೈಸುವ ತತ್ಕಾಲದಲ್ಲಿ ಜಾರಿಯಲ್ಲಿರುವ ಪಾಸ್‌ಪೋರ್ಟ್; ಮತ್ತು

"ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು.

**3. ನಿಯಮಗಳನ್ನು ರಚಿಸಲು ಅಧಿಕಾರ.**- (1) ಕೇಂದ್ರ ಸರ್ಕಾರವು, ಭಾರತವನ್ನು ಪ್ರವೇಶಿಸುವ ವ್ಯಕ್ತಿಗಳು ಪಾಸ್‌ಪೋರ್ಟ್‌ಗಳನ್ನು ಹೊಂದಿರಬೇಕೆಂದು ಅಗತ್ಯಪಡಿಸಲು ಮತ್ತು ಆ ಉದ್ದೇಶಕ್ಕೆ ಪೂರಕವಾದ ಅಥವಾ ಪ್ರಾಸಂಗಿಕವಾದ ಎಲ್ಲಾ ವಿಷಯಗಳಿಗಾಗಿ ನಿಯಮಗಳನ್ನು ರಚಿಸಬಹುದು.

(2) ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು-

(ಎ) ಯಾರೇ ವ್ಯಕ್ತಿಯು, ತನಗೆ ನೀಡಿದ ಪಾಸ್‌ಪೋರ್ಟನ್ನು ಹೊಂದಿರದಿದ್ದರೆ ಆ ವ್ಯಕ್ತಿಯು ಭಾರತಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಪ್ರವೇಶಿಸುವುದನ್ನು ನಿಷೇಧಿಸಬಹುದು;

(ಬಿ) ಈ ಅಧಿನಿಯಮದ ಉದ್ದೇಶಗಳಿಗಾಗಿ, ಪಾಸ್‌ಪೋರ್ಟ್‌ಗಳನ್ನು ಯಾವ ಪ್ರಾಧಿಕಾರಿಗಳು ನೀಡತಕ್ಕದ್ದೋ ಅಥವಾ ನವೀಕರಿಸತಕ್ಕದ್ದೋ ಆ ಪ್ರಾಧಿಕಾರಿಗಳನ್ನು ಮತ್ತು ಅವರು ಪಾಲಿಸಬೇಕಾದ ಷರತ್ತುಗಳನ್ನು ನಿಯಮಿಸಬಹುದು; ಮತ್ತು

(ಸಿ) ಅಂಥ ನಿಯಮಗಳ ಯಾವುದೇ ಉಪಬಂಧಗಳಿಂದ ಸಂಪೂರ್ಣವಾಗಿ ಅಥವಾ ಯಾವುದೇ ಷರತ್ತಿನ ಮೇಲೆ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ವಿನಾಯಿತಿ ನೀಡಲು ಉಪಬಂಧ ಕಲ್ಪಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳು, ಅವುಗಳ ಯಾವುದೇ ಉಲ್ಲಂಘನೆಯು ಅಥವಾ ಅಂಥ ಯಾವುದೇ ನಿಯಮದ ಮೇರೆಗಿನ ಅಧಿಕಾರದಿಂದ ಹೊರಡಿಸಿದ ಯಾವುದೇ ಆದೇಶದ ಯಾವುದೇ ಉಲ್ಲಂಘನೆಯು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು.

(4) ಈ ಪ್ರಕರಣದ ಮೇರೆಗೆ ರಚಿಸಿದ ಎಲ್ಲಾ ನಿಯಮಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು, ಮತ್ತು ತರುವಾಯ ಅವು ಈ ಅಧಿನಿಯಮದಲ್ಲಿ ಒಳಗೊಂಡಿದ್ದಿದ್ದರೆ ಹೇಗೋ ಹಾಗೆ ಪರಿಣಾಮ ಹೊಂದಿರತಕ್ಕದ್ದು.

(5) ಈ ಅಧಿನಿಯಮದ ಮೇರೆಗೆ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ, ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ, ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**3ಎ. ತರುವಾಯದ ಅಪರಾಧಗಳಿಗಾಗಿ ದಂಡನೆ.–** ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಮಾಡಿದ ಆದೇಶದ ಮೇರೆಗೆ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದ ಯಾರಾದರೂ ಈ ಅಧಿನಿಯಮದ ಮೇರೆಗೆ ಮತ್ತೆ ಅಪರಾಧದ ಅಪರಾಧಿಯೆಂದು ನಿರ್ಣೀತನಾದರೆ, ಮತ್ತೆ ಮಾಡಿದ ಆ ಅಪರಾಧಕ್ಕೆ ಉಪಬಂಧಿಸಿರುವ ದಂಡನೆಯ ದುಪ್ಪಟ್ಟು ದಂಡನೆಗೆ ದಂಡನೀಯನಾಗತಕ್ಕದ್ದು.

**4. ದಸ್ತಗಿರಿ ಮಾಡುವ ಅಧಿಕಾರ.–** (1) ಸಬ್–ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಯು ಮತ್ತು ಈ ಬಗ್ಗೆ ಕೇಂದ್ರ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕಾರ ಪಡೆದ ಸೀಮಾಸುಂಕ ಇಲಾಖೆಯ ಯಾರೇ ಅಧಿಕಾರಿಯು, 3ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಅಥವಾ ಆದೇಶವನ್ನು ಉಲ್ಲಂಘಿಸಿರುವ ಯಾರೇ ವ್ಯಕ್ತಿಯನ್ನು ಅಥವಾ ಉಲ್ಲಂಘಿಸಿದ್ದಾನೆಂದು, ಯಾವ ವ್ಯಕ್ತಿಯ ಬಗ್ಗೆ ಸಮಂಜಸವಾದ ಸಂದೇಹವಿದೆಯೋ ಆ ಯಾರೇ ವ್ಯಕ್ತಿಯನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು.

(2) ಈ ಪ್ರಕರಣದ ಮೇರೆಗೆ ದಸ್ತಗಿರಿ ಮಾಡುವ ಪ್ರತಿಯೊಬ್ಬ ಅಧಿಕಾರಿಯು, ಅನಗತ್ಯ ವಿಳಂಬ ಮಾಡದೆ, ದಸ್ತಗಿರಿಯಾದ ವ್ಯಕ್ತಿಯನ್ನು ಸುಪರ್ದಿಗೆ ತೆಗೆದುಕೊಳ್ಳತಕ್ಕದ್ದು ಅಥವಾ ಆ ಪ್ರಕರಣದಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟನ ಮುಂದೆ ಅಥವಾ ಹತ್ತಿರದ ಪೊಲೀಸ್ ಠಾಣೆಯ ಪ್ರಭಾರಿ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು ಮತ್ತು ಯಾವುದೇ ಅಂಥ ದಸ್ತಗಿರಿಯ ಸಂಬಂಧದಲ್ಲಿ ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2)ರ 57ನೇ ಪ್ರಕರಣದ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

**5. ಹೊರಹಾಕಲು ಅಧಿಕಾರ.–** ಕೇಂದ್ರ ಸರ್ಕಾರವು, ಪಾಸ್‌ಪೋರ್ಟ್ ಇಲ್ಲದೆ ಭಾರತಕ್ಕೆ ಪ್ರವೇಶಿಸುವುದನ್ನು ನಿಷೇಧಿಸುವ 3ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿ ಭಾರತಕ್ಕೆ ಪ್ರವೇಶಿಸಿದ ಯಾರೇ

ವ್ಯಕ್ತಿಯನ್ನು ಭಾರತದಿಂದ ಹೊರಹಾಕಲು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ನಿರ್ದೇಶಿಸಬಹುದು ಮತ್ತು ತದನಂತರ ಸರ್ಕಾರದ ಯಾರೇ ಅಧಿಕಾರಿಯು ಅಂಥ ನಿರ್ದೇಶನವನ್ನು ಜಾರಿಗೊಳಿಸಲು ಅಗತ್ಯವಿರುವ ಎಲ್ಲಾ ಸಮಂಜಸ ಅಧಿಕಾರಗಳನ್ನು ಹೊಂದಿರತಕ್ಕದ್ದು.

**6**. [**ಬಿ ಭಾಗದ ರಾಜ್ಯಗಳಿಗೆ ಅಧಿನಿಯಮದ ಅನ್ವಯ**].- ಬಿ ಭಾಗದ ರಾಜ್ಯಗಳ (ಕಾನೂನುಗಳು) ಅಧಿನಿಯಮ, 1951 (1951 ರ 3)ರ 3ನೇ ಪ್ರಕರಣದ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.